ಇದಲ್ಲದೆ ಒಬ್ಬ ಮುಖ್ಯ ಕಾರ್ಯನಿರ್ವಾಹಕ (ಇಂಜಿನಿಯರ್)ರನ್ನು ಕಾರ್ಖಾನೆಯು ನೇಮಿಸಿಕೊಂಡಿದೆ. ಮೇಲ್ಕಾಣಿಸಿದ ನೌಕರರಲ್ಲಿ ೩೨ ಮಂದಿಯನ್ನು ದಿನಗೂಲಿಯ ಮೇಲೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ ಮತ್ತು ೧೭ ಜನ ಕಾಯಂ ನೌಕರರನ್ನು ನೇಮಿಸಿಕೊಳ್ಳಲಾಗಿದೆ. ಇದಲ್ಲದೆ ಬೇರೆ ಇಲಾಖೆಗಳಿಂದ ಎರವಲು ಸೇವೆಗೆ ಬಂದ ಅಧಿಕಾರಿಗಳ ವಿವರ ಈ ಕೆಳಕಂಡಂತಿದೆ :

೧	ಕಾರ್ಯ ನಿರ್ವಾಹಕರು	—೧	(ಉಪ ನಿಬಂಧಕರು ಸಹಕಾರ ಇಲಾಖೆ)
೨	ಕಾರ್ಯದರ್ಶಿಗಳು	—೧	(ಸಹಾಯಕ ನಿಬಂಧಕರು, ಸಹಕಾರ ಇಲಾಖೆ)
೩	ಲೆಕ್ಕಾಧಿಕಾರಿಗಳು	—೧	(ಸಹಕಾರ ಇಲಾಖೆ)
೪	ಸಹಾಯಕ ಎಕ್ಸೆಕ್ಯೂಟಿವ್ ಇಂಜಿನಿಯರ್	—೧	(ಲೋಕೋಪಯೋಗಿ ಇಲಾಖೆ)
೫	ಸಹಾಯಕ ಎಂಜಿನಿಯರ್	—೧	
೬	ಸಹಾಯಕ ಕೃಷಿ ಅಧಿಕಾರಿಗಳು	—೨	(ಕೃಷಿ ಇಲಾಖೆ)

೧೬ ಮಂದಿ ಸಿಬ್ಬಂದಿಯನ್ನು ಕಾರ್ಖಾನೆಗೆ ನೇಮಕಾತಿಯು ಸಮಿತಿಯು ಕಾನೂನಿನನುಗುಣವಾಗಿ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ನೇಮಕ ಮಾಡಲಾಗಿದೆ (ಎರವಲು ಸೇವೆಯವರು ಬಿಟ್ಟು) ಹಾಗೂ ಮುಂದೆ ನೇಮಕಾತಿ ಸಮಿತಿಯು ನೌಕರರನ್ನು ನೇಮಿಸಿಕೊಳ್ಳುವಾಗ ಇದೇ ಪದ್ಧತಿಯನ್ನು ಅನುಸರಿಸಲಾಗುವುದು ಮತ್ತು ನೇಮಕಾತಿ ಸಮಿತಿಯು ಜಾರಿಗೆ ಬರುವುದಕ್ಕೆ ಮುಂಚೆ ಒಬ್ಬ ನೌಕರರನ್ನು ಕಾರ್ಖಾನೆಯ ಕಾರ್ಯಕಾರಿ ಸಮಿತಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನೇಮಿಸಿಕೊಂಡಿದೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ೧೯ ಜನ ಖಾಯಂ ನೌಕರರನ್ನು, ಮತ್ತು ೩೨ ಜನ ನೌಕರರನ್ನು ತಾತ್ಕಾಲಿಕವಾಗಿ ಎಂದಿನಿಂದ ನೇಮಿಸಿಕೊಳ್ಳಲಾಯಿತು ? ಕಬ್ಬು ಅರೆಯುವ ಕಾರ್ಯ ಯಾವಾಗಿನಿಂದ ಪ್ರಾರಂಭವಾಗಿದೆ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಆ ವಿವರಗಳು ನನ್ನ ಹತ್ತಿರ ಇಲ್ಲ. ಕಬ್ಬನ್ನು ಅರೆಯುವ ಕಾರ್ಯ ಮಾರ್ಚ್ ಕಡೆಯಲ್ಲಿ ಅಥವಾ ಏಪ್ರಿಲ್ ೧ನೇ–೨೦ರೊಳಗೆ ಪ್ರಾರಂಭವಾಗುವುದು.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಕಛೇರಿ ಬ್ರಹ್ಮಾವರದಲ್ಲಿದೆಯೋ ? ಮಂಗಳೂರಿನಲ್ಲಿದೆಯೋ ? ಬೆಂಗಳೂರಿನಲ್ಲಿದೆಯೋ ?

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ಸಧ್ಯಕ್ಕೆ ಮಂಗಳೂರಿನಲ್ಲಿದೆ.

ಶ್ರೀ ಬಿ. ಬಿ. ಶೆಟ್ಟಿ.—ಮಂಗಳೂರಿನಿಂದ ಬ್ರಹ್ಮಾವರ ಸುಮಾರು ೭೦ ಕಿಲೋಮೀಟರ್ ದೂರದಲ್ಲಿದೆ. ಇದರಿಂದ ಆ ಭಾಗದ ರೈತರಿಗೆ ಹೆಚ್ಚಿನ ತೊಂದರೆಯಾಗಿದೆ. ೪ ತಿಂಗಳ ಹಿಂದೆಯೇ ಮಂಗಳೂರಿನಿಂದ ಆಫೀಸು ಬದಲಾಯಿಸುವ ಮಾತು ಕೇಳಿ ಬಂದರೂ ಇನ್ನು ಕಾರ್ಯಗತ ಮಾಡಿಲ್ಲ. ಇದು ಬಹಳ ಬೇಸರದ ಸಂಗತಿಯಾಗಿದೆ. ಅಲ್ಲಿ ಇರತಕ್ಕ ಕೆಲವು ಇಂಜಿನಿಯರುಗಳು ತಮ್ಮ ಸ್ವೇಚ್ಛಾವೃತ್ತಿಯಿಂದ ಟೆಂಡರ್ ಕರೆಯದೇ ಮಿಷಿ ಬಂದವರಿಗೆ ಕೆಲಸಗಳನ್ನು ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಜಿಲ್ಲಾಧಿಕಾರಿಗಳನ್ನೇ, ಆ ಕಾರ್ಖಾನೆಯ ಛೇರ್ಮನ್ ಆಗಿ ನೇಮಿಸಿದ್ದೇವೆ. ಅಲ್ಲಿ ಅವ್ಯವಹಾರಗಳು ನಡೆದಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅದು ನನ್ನ ಗಮನಕ್ಕೆ ಬಂದಿರಲಿಲ್ಲ ಬಂದಿದ್ದರೆ ಇಷ್ಟು ಹೊತ್ತಿಗೆ ಕ್ರಮ ಕೈಗೊಳ್ಳುತ್ತಿದ್ದೆ. ನಾನು ಇವತ್ತಿನ ದಿವಸ ಮಂಗಳೂರಿನ ಜಿಲ್ಲಾಧಿಕಾರಿಗಳನ್ನು ಫೋನ್ ಮುಖಾಂತರ ಮಾತನಾಡಿ ಅಲ್ಲಿ ಏನು ಅವ್ಯವಹಾರವಾಗಿದೆಯೆಂದು ಹೇಳುತ್ತಿದ್ದೀರಿ ಅದರ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ಎರಡನೆಯದಾಗಿ ನಾನು ಅಲ್ಲಿಗೆ ಹೋಗಿದ್ದಾಗ ೮ ದಿವಸಗಳಲ್ಲಿ ಆಫೀಸ್‌ನ್ನು ಶಿಫ್ಟ್ ಮಾಡಬೇಕೆಂದು ಹೇಳಿದ್ದೆ, ಆದು ಕೂಡ ಆಗಿಲ್ಲವೆಂದು ಹೇಳುತ್ತಿದ್ದಾರೆ ಅದನ್ನು ಸಹ ಜಿಲ್ಲಾಧಿಕಾರಿಗಳವರಿಗೆ ತಿಳಿಸಿ ಸರಿಯಾದ ಸೂಚನೆ ನೀಡುತ್ತೇನೆ.

ವಿಷಯ : ಭಟ್ಕಳ ತಾಲ್ಲೂಕಿನ ಸುಸಗಡಿ ಗ್ರಾಮದ ಸರ್ವೆ ನಂ. ೪೭೫ರಲ್ಲಿಯ ಜಮೀನನ್ನು ಅರಣ್ಯ ಖಾತೆಯಿಂದ ಕಂದಾಯ ಖಾತೆಗೆ ಸ್ವಾಧೀನ ಪಡೆದಿರುವ ಬಗ್ಗೆ

೩೮೫. (೧೧೧೮) ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಭಟ್ಕಳ ತಾಲ್ಲೂಕು ಸುಸಗಡಿ ಗ್ರಾಮ ಸರ್ವೆ ನಂ. ೪೭೫ರಲ್ಲಿ ಕಂದಾಯ ಖಾತೆಯವರು ಅರಣ್ಯ ಖಾತೆಯಿಂದ ೭-೨೮-೪ ಕ್ಷೇತ್ರಪನ್ನು ತಮ್ಮ ಸ್ವಾಧೀನಕ್ಕೆ ಪಡೆದಿರುವುದು ನಿಜವೇ ? ಮತ್ತು ಈ ವಿಚಾರ ಗ್ರಾಮದ ಪಹಣಿಯಲ್ಲಿ ದಾಖಲಾಗಿದೆಯೇ,

(ಆ) ಮನೆ ನಿವೇಶನವನ್ನು ಕಟ್ಟಿಸಿಕೊಡುವುದರ ಬಗ್ಗೆ ಈ ಜಮೀನು ಅರಣ್ಯ ಖಾತೆಯಿಂದ ಕಂದಾಯ ಖಾತೆಯ ಸ್ವಾಧೀನಕ್ಕೆ ಕೆ ಡಲಾಗಿದೆಯೇ.

(ಇ) ಈ ತನಕ ಎಷ್ಟು ಜನರಿಗೆ ಈ ಸ್ಥಳದಲ್ಲಿ ಮನೆ ನಿವೇಶನ ಕಲ್ಪಿಸಲಾಗಿದೆ?

(ಈ) ಆ ಕೆಲಸ ಇನ್ನೂ ಪ್ರಾರಂಭವಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ವಿ.ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

(ಅ) ಹೌದು. ಈ ಬಗ್ಗೆ ಪಹಣಿಯಲ್ಲಿ ಸೂಕ್ತ ದಾಖಲೆ ಇಡಲಾಗಿದೆ.

(ಆ) ಇಲ್ಲ.

(ಇ) ಇಲ್ಲ.

(ಈ) ಉಪ ಪ್ರಶ್ನೆ (ಆ) ಮತ್ತು (ಇ) ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ಎನ್. ನಾಯಕ್. – ಭಟ್ಕಳ ತಾಲ್ಲೂಕಿನ ಸುಸಗಡಿ ಗ್ರಾಮದಲ್ಲಿ ಮನೆ ಇಲ್ಲದೆ ಇರತಕ್ಕ ಬಡವರು ಎಷ್ಟೋ ವರ್ಷದಿಂದ ಸರ್ಕಾರದವರನ್ನೇ ಕೇಳುತ್ತಾ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಎರಡನೆಯದಾಗಿ, ಮನೆ ಕಟ್ಟಿಸಿಕೊಂಡಿರುವವರಿಗೆ ಆ ಜಾಗವನ್ನು ಅವರಿಗೇ ಕೊಡುವ ಬಗ್ಗೆ ಏನಾದರೂ ಆದೇಶ ನೀಡುತ್ತೀರಾ ?

ಶ್ರೀ ವಿ.ಎಲ್, ಪಾಟೀಲ್.—ಬಡವರಿಗೆ ಮನೆಗಳು ಇಲ್ಲದಿದ್ದರೆ ಕಟ್ಟಿಸಿ ಕೊಡುವ ಬಗ್ಗೆ ಪರಿಶೀಲನೆ ಮಾಡೋಣ. ಆ ಜಾಗ ಫಾರೆಸ್ಟ್ ಖಾತೆಯಿಂದ ರೆವಿನ್ಯೂ ಖಾತೆಗೆ ಬಂದಿದೆಯೇ ಎಂಬುದನ್ನು ನೋಡಿಕೊಂಡು ಪರಿಶೀಲನೆ ಮಾಡೋಣ.

Drought in Kolar District

899. SRI A. NAGARAJU (M.L.A.).—

(a) whether the Government is aware that there was severe drought in Kolar District during the year 1983-84.

(b) the measures taken by Govt. in this regard.

(c) number of villages in Kolar District which are affected by failure of crops (Talukwise figures may kindly be furnished).

(d) The number of villages where the remission is given by Govt. in the Kolar District (Talukwise figures may please be furnished) ?

SRI V. L. PATIL (Hon. Minister for Revenue).—

(a) In Kolar District, during 1983-84, the Monsoon was delayed. The District received rains during the month of July

onwards in all the taluks except Bagepalli and Gudibanda where rains were received only during September onwards. However, the Khariff crops were affected only in parts of Srinivaspur and Bangarapet Taluks.

(b) Since the rains were received late, the agricultural labourers were without work upto the end of July 1983. Relief works were started in all the places in the District where there was demand for work. The Govt. released Rs. 95.00 lakhs under scarcity relief out of which an amount of Rs. 81.90 lakhs was spent on relief works. Apart from this, works under N.R.E.P. and Departmental budgetted works were also taken up to provide work for the needy people.

(c) Statement showing the taluk-wise figures is enclosed. The yield in a few affected villages was about 25 paise, but in most other parts, it is about 42 paise.

(d) Proposals are awaited.

Statement showing the Villages affected by failure of Crops in Kolar Taluk.

Sl. No.	Taluk	Villages
1	2	3
1	Bagepalli	Nil
2	Bangarpet	2 0
3	Chickballapur	Nil
4	Chintamani	Nil
5	Gouribidanur	Nil
6	Gudibanda	Nil
7	Kolar	Nil
8	Malur	Nil
9	Mulbagal	Nil
10	Siddlaghatta	Nil
11	Srinivasapura	155
	Total	355

ಶ್ರೀ ಎ. ನಾಗರಾಜ್.—ಮಾನ್ಯ ಅಧ್ಯಕ್ಷರೇ, ೧೯೮೨-೮೩ನೇ ಇಸ್ವಿಯಲ್ಲಿ ಇಡೀ ಕೋಲಾರ ಜಿಲ್ಲೆ ಬರಗಾಲ ಪೀಡಿತ ಪ್ರದೇಶವಾಗಿತ್ತು. ಬಹುಶಃ ಯಾವ ಜಿಲ್ಲೆಯಲ್ಲೂ ೨೫ ಪೈಸೆ ಬೆಳೆಯಾಗಿರಲಿಲ್ಲ, ಹಾಗೆಯೇ ೧೯೮೩-೮೪ರಲ್ಲಿ ೩೫೫ ಹಳ್ಳಿಗಳಿಗೆ ೨೫ ಪೈಸೆಗಿಂತ ಹೆಚ್ಚಿಗೆ ಬೆಳೆಯಾಗಿರಲಿಲ್ಲ. ಕಾನೂನು ಪ್ರಕಾರವಾಗಿ ೨೫ ಪೈಸೆಗಿಂತ ಕಡಿಮೆ ಬೆಳೆಯಾಗಿರುವ ಹಳ್ಳಿಗಳಲ್ಲಿ ಕಂದಾಯವನ್ನು ಮಾಫಿ ಮಾಡಬೇಕು ಎನ್ನುವುದು ಇದೆ. ಆದರೆ ಕೆಲವು ಗ್ರಾಮ ಲೆಕ್ಕಿಗರು ಕೆಲವು ಹಳ್ಳಿಗಳಲ್ಲಿ ಕಂದಾಯ ಬಾಕಿ ಬಗ್ಗೆ ರೈತರಿಗೆ ಬಹಳ ಕಿರುಕುಳವನ್ನು ಕೊಡುತ್ತಿದ್ದಾರೆ ಇದರ ಬಗ್ಗೆ ಸರ್ಕಾರದವರು ತಕ್ಷಣವೇ ಆದೇಶ ಕಳುಹಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಕಾನೂನು ಪ್ರಕಾರವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

MR. DEPUTY SPEAKAR.—Question hour is over.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ ಪಟ್ಟಿ

ವಿಷಯ : ಭೂದಾನ ವಿದ್ಯಾದಾನಕ್ಕೆ ಸರ್ವೆ ನಂ. ೧೬, ತೆನೆಯೂರು ಗ್ರಾಮದ ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕಿನಲ್ಲಿ ಮಾಧ್ಯಮಿಕ ಶಾಲೆಗೆ, ಬೆಂಡಿಗಾನಹಳ್ಳಿ, ಸೂಲಿಬೆಲೆ ಹೋಬಳಿ, ಹೊಸಕೋಟೆ (ತಾಲ್ಲೂಕು ಬೆಂಗಳೂರು ಜಿಲ್ಲೆ, ಭೂದಾನ ಮಾಡಿದ ಬಗ್ಗೆ.)

೩೭೯. (೯೩೫) ಎನ್. ಚಿಕ್ಕೆಗೌಡ (ಹೊಸಕೋಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಮಂತ್ರಿಗಳು ದಯವಿಟ್ಟು ಉತ್ತರಿಸಿಬೇಕು ?

(ಅ) ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿ ತೆನೆಯೂರು ಗ್ರಾಮದ ಸರ್ವೆ ನಂ. ೧೬ರಲ್ಲಿ ೧೫ ಎಕರೆ ಜಮೀನನ್ನು ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕಿನಲ್ಲಿರುವ ಬೆಂಡಿಗಾನಹಳ್ಳಿ ಗ್ರಾಮದ ಸರ್ಕಾರಿ ಮಾಧ್ಯಮಿಕ ಶಾಲೆಗೆ ಶ್ರೀ ನಾರಾಯಣಗೌಡರು ದಿನಾಂಕ ೨೬ನೇ ಅಕ್ಟೋಬರ್ ೧೯೫೬ರಲ್ಲಿ ದಾನಪತ್ರ ಬರೆದಿರುವುದು ನಿಜವಲ್ಲವೇ,

(ಆ) ಹಾಗಿದ್ದಲ್ಲಿ, ಸದರೀ ಜಮೀನಿನ ಖಾತೆಯು ವಿದ್ಯಾಸಂಸ್ಥೆಯ ಹೆಸರಿಗೆ ವರ್ಗಾಯಿಸಿದೆಯೆ,

(ಇ) ಇದನಂತರ, ಪಾವತಿ ನಾರಾಯಣಗೌಡರ ವಾರಸುದಾರರು ಅದನ್ನು ಬೇರೆಯವರಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

(ಈ) ಹಾಗಿದ್ದಲ್ಲಿ, ಸರ್ಕಾರವು ಸದರೀ ವ್ಯವಹಾರವನ್ನು ರದ್ದು ಮಾಡಲು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

(ಅ) ಹೌದು.

(ಆ) ಹೌದು.

(ಇ) ಇಲ್ಲ.

(ಈ) ಉಪ ಪ್ರಶ್ನೆ (ಇ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ,